# ಒಡೆದು ಕಟ್ಟುವ ಸವಾಲಿಗೆ ಒಡ್ಡಿಕೊಂಡ ಶಕ್ತ ಕಥೆಗಳು

**ಗೌರಿ**

'ಯಶಸ್ವಿ ಕಥೆ ಎಂಬುದೇ ಒಂದು ಭ್ರಮೆ', 'ಕಥೆಗಾರ ಏನು ಹೇಳಲು ಹೊರಟಿದ್ದಾನೆ ಎಂಬುದು ಮುಖ್ಯ; ಕಲಾತ್ಮಕತೆ, ಭಾಷಾ ಶುದ್ಧಿ, ಶಿಲ್ಪದ ಕುರಿತಾದ ಎಚ್ಚರ ಇವೆಲ್ಲ ಅಷ್ಟು ಮುಖ್ಯವೇನಲ್ಲ', 'ಇಂದಿನ ಸಂದರ್ಭದಲ್ಲಿ ವಿಮರ್ಶೆಯ ಅಗತ್ಯವೇ ಇಲ್ಲ. ಓದುಗರ ಮೆಚ್ಚುಗೆಗಿಂತ ದೊಡ್ಡ ವಿಮರ್ಶೆ ಬೇರೆ ಇಲ್ಲ', 'ಮಹತ್ವಾಕಾಂಕ್ಷೆಯ ಕೃತಿಗಳನ್ನೇ ರಚಿಸಬೇಕು ಎಂಬ ಹಟ ಬರಹಗಾರನಿಗೆ ಬೇಕಿಲ್ಲ', 'ಸಮಕಾಲೀನ ವಿದ್ಯಮಾನಗಳಿಗೆ ಸ್ಪಂದಿಸದ ಬರಹಗಾರ ಎಷ್ಟು ಒಳ್ಳೆಯ ಕೃತಿ ರಚಿಸಿದ್ದರೂ ಅದು ಮುಖ್ಯವಲ್ಲ' ....

—ಇಂಥ ಹತ್ತು ಹಲವು 'ಸ್ಟೇಟ್‌ಮೆಂಟ್'ಗಳು ಸಾಹಿತ್ಯಲೋಕದಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಕೇಳಿಸುತ್ತಲೇ ಇರುತ್ತವೆ. ಇತ್ತೀಚಿನ ದಿನಗಳಲ್ಲಂತೂ ಇಂಥ ಇನ್ನಷ್ಟು ಸ್ಟೇಟ್‌ಮೆಂಟ್‌ಗಳು ಗಟ್ಟಿಯಾಗಿ, ಇನ್ನಷ್ಟು ಹರಿತವಾಗಿ ಪ್ರಹಾರ ಮತ್ತು ರಕ್ಷಣೆ ಎರಡೂ ರೂಪದಲ್ಲಿ ಝಳಪಿಸುತ್ತಲಿವೆ. ಸರಿಯಾದ ವಿವರಣೆ, ಸಂದರ್ಭದ ಔಚಿತ್ಯ ಇಲ್ಲದೆ ಆಡಿದಾಗ, ಬಹುಪಾಲು ದಾರಿ ತಪ್ಪಿಸುವ ಕೆಲಸವನ್ನೇ ಮಾಡುವ ಇಂಥ ಸ್ಟೇಟ್‌ಮೆಂಟ್‌ಗಳು ಧ್ಯಾನಭಂಗಿ, ಆಶೀರ್ವಾದಭಂಗಿಯಲ್ಲಿರುವ ಹಿರಿಯರ ಬಾಯಿಯಲ್ಲಿಯೇ ಹೆಚ್ಚಾಗಿ ಬರುತ್ತಿವೆ. ಇದರ ಪರಿಣಾಮವಾಗಿ, ಇಂಥ ಸ್ಟೇಟ್‌ಮೆಂಟ್‌ಗಳ ಚುಂಗು ಹಿಡಿದು ಹೊರಟವರು ಮತ್ತು ಹೊಗಳಿಕೆಯ ಹೊನ್ನಶೂಲದ ಗುಂಗಿನಲ್ಲಿ 'ದ್ವೀಪ ಮಂಡೂಕ' ಆಗಿರುವ ಯುವ ಬರಹಗಾರರ ದೊಡ್ಡ ಗುಂಪೇ ರೂಪುಗೊಂಡಿದೆ. ಕನ್ನಡ ಸಾಹಿತ್ಯಲೋಕಕ್ಕೆ ಇದೇನೂ ತೀರ ಹೊಸ ಸಂಗತಿಯಲ್ಲ. ಎಲ್ಲ ಕಾಲಕ್ಕೂ ಇಂಥ ಗುಂಪುಗಳು ಬೇರೆ ಬೇರೆ ರೂಪದಲ್ಲಿ ಇದ್ದಂಥವೇ. ಆದರೆ, ಆತ್ಮವಂಚನೆ, ಲಜ್ಜೆಗೇಡಿತನ ಮತ್ತು ಸಂವೇದನಾಹೀನತೆಯಂಥ ರೋಗಲಕ್ಷಣಗಳು ಹಿಂದೆಂದಿಗಿಂತಲೂ ಈಗ ಉಲ್ಬಣಗೊಂಡಿರುವುದಂತೂ ಸತ್ಯ.

ಅತ್ಯಾಕರ್ಷಕವೂ, ಸುಖದಾಯಕವಾಗಿಯೂ ಕಾಣುವ, ಆದರೆ ಬರವಣಿಗೆಯ ಮೂಲ ಉದ್ದೇಶದಿಂದಲೇ ವಿಮುಖಗೊಳಿಸಿಬಿಡಬಲ್ಲ ಈ 'ಖೆಡ್ಡಾ'ವನ್ನು ದಾಟಿ ಮುಂದೆ ನಡೆಯುವುದು ಇಂದಿನ ಬರಹಗಾರರ ಬಹುದೊಡ್ಡ ಸವಾಲುಗಳಲ್ಲಿ ಒಂದು. ಒಂದಲ್ಲ, ಒಂದು ರೀತಿಯಲ್ಲಿ ಅದನ್ನು ಎದುರಿಸಲೇಬೇಕು. ಸಿನಿಮಾ ಬರಹಗಾರರಾಗಿ ಬದುಕು ರೂಪಿಸಿಕೊಳ್ಳುವ ಪ್ರಯತ್ನದಲ್ಲಿರುವ ಸಂಪತ್ ಸಿರಿಮನೆ ಅವರ ಮೊದಲ ಕಥಾಸಂಕಲನ 'ಲೆಟ್ಸ್ ಬ್ರೇಕಪ್', ತನ್ನಮುಗ್ಧತೆಯ ಶಕ್ತಿಯಿಂದಲೇ ಮೇಲೆ ಹೇಳಿದ ಸವಾಲನ್ನು ಎದುರಿಸಲು ಯತ್ನಿಸುತ್ತಿರುವಂತೆ ಕಾಣಿಸುತ್ತದೆ. ಸಂಪತ್ ಅವರ ಹಲವು ಕಥೆಗಳಲ್ಲಿ ಕಾಣಿಸುವ ಮಧ್ಯಮವರ್ಗದ 'ಮೀಡಿಯೋಕರ್' ಮನಸ್ಥಿತಿಯ ನಿರೂಪಕ, ಇಂದಿನ ಸಾಹಿತ್ಯ ಸಂದರ್ಭದ ರೋಗಗ್ರಸ್ತ ಮನಸ್ಥಿತಿಯನ್ನೂ ಪ್ರತಿನಿಧಿಸುತ್ತಿದ್ದಾನೆ.